ಜೇಲಿನಲ್ಲಿಯ ಕಷ್ಟಕಾರ್ಪಣ್ಯಗಳು

ಜೇಲಿನ ರುಕ್ಷ ಜೀವನವನ್ನು ಪ್ರತ್ಯಕ್ಷ ಅನುಭವಿಸಿಯೇ ನೋಡದ ಹೊರ್ತು ಉಳಿದವರಿಗೆ ಅದರ ಕಲ್ಪನೆ ಬರಲಾರದು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಮ್ಮ ಜೇಲುಗಳು ಮುಂಚಿನ ಜೇಲುಗಳಾಗಿ ಉಳಿದಿಲ್ಲ. ಈಗ ಅವು ಕಾಲೇಜ ವಿದ್ಯಾರ್ಥಿಗಳ ವಸತಿಗೃಹಗಳಾಗಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕೈದಿಗಳು ಮೈಯಿಂದ ದಳದಳ ಬೆವರು ಸೋರಿಸುತ್ತ ಬೀಸುವ ಆ ಬೀಸುವ ಕಲ್ಲುಗಳು ಕೈದಿಗಳ ಎದೆ ನಡಗಿಸುತ್ತಿದ್ದವು! ಓಣಿಯ ಬದಿಗೆ ಹಾಗೂ ಹೊಲದಲ್ಲಿ ಹಾಳಿಯ ಮೇಲೆ ಬೆಳೆದ ಗೋಳಿ, ಉತ್ತಾಣಿ ಹಾಗು ಪಪ್ಪಟಿಯಿಯ ತೊಪ್ಪಲ ಕೂಡಿದ ಹಸರಾಣಿ ಪಲ್ಲೆ, ಆ ಪಲ್ಲೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಳಹುಪ್ಪಡಿ, ಇರುವೆ. ಜಿಟ್ಟಿಗಳು, ಅಂದಮಾನದ ಜೇಲಿನಲ್ಲಿ ಪಲ್ಲೆದಲ್ಲಿ ಬರುತ್ತಿದ್ದ ಹಾವಿನ ತುಂಡುಗಳು, ಓದಲು ಪುಸ್ತಕಗಳಿಲ್ಲದ, ಬರೆಯಲು ಕಾಗದ ಪೆನಸೀಲು ಕೊಡದ ಆ ಪ್ರತಿಬುಧ, ವೃತ್ತಪತ್ರಗಳಿಗೆ ಅವಕಾಶವಿಲ್ಲದ ಆ ಕಠೋರ ನಿಯಮ, ಸಾರ್ವಜನಿಕ ಸಂಡಾಸಗಳಲ್ಲ ಜನರು ಸೇದಿ ಒಗೆದ ಬೀಡಿಯ ಸುಟಿಕಗಳಿಗೂ ಒಂದಕ್ಕೆ ಎರಡಾಣೆಯಂತೆ ಕಳವಿನಿಂದ ಕೈದಿಗಳು ಕೂಡುತ್ತಿದ್ದ ಆ ಬೆಲೆ, ಉಪ್ಪಿನ ಹರಳನ್ನೂ ನೋಡಲು ಸಿಗದ ಆ ಜೀವನ, ಜಡ್ಡಾಗಿದೆಯೆಂದು ಕ್ವೆದಿಯು ದವಾಖಾನೆಗೆ ಹೋದರೆ " ಯೇ ಲೇವ್ ದವಾ " (ಇಕೋ ತಕ್ಕೊ ಔಷದ) ಎಂದು ಗರ್ಜಿಸುತ್ತ ಜೇಲ ಡಾಕ್ಟರನು ಕೈದಿಯ ಬೆನ್ನ ಮೇಲೆ ಮಾಡುತ್ತಿದ್ದ ರೂಲ ಕಟ್ಟಿಗೆಯ ಪ್ರಹಾರ, ಸ್ವಾಭಿಮಾನಕ್ಕೆ ಭಂಗ ಬರುವಂಥ ಜೇಲ ನಿಯಮ, ಮತ್ತು ಆ ನಿಯಮಗಳನ್ನು ಮುರಿದದ್ದಕ್ಕೆ ಕೊಡಲಾಗುತ್ತಿದ್ದ ಜೇಲಿನೊಳಗಿನ ವಿಧವಿಧದ ಶಿಕ್ಷೆ, ಕೈದಿವಾರ್ಡರರು ತಮ್ಮ ಕೈಯೊಳಗಿನ ದಂಡಾದಿಂದ ಅಗಾಗ ಕೈದಿಗಳನ್ನು ಹೊಡೆಯುತ್ತಿದ್ದ ಆ ದೃಶ್ಯ, ಆರಾರು ತಿಂಗಳು ವರುಷ ಗಟ್ಟಲೆ ಮನೆಯವರ ಭೆಟ್ಟಿಯಿಲ್ಲದ ಪತ್ರವಿಲ್ಲದ ಮನೋವೇದನೆ, ಎರಡೇ ಎರಡು ಹಸಿಬಿಸಿ ರೊಟ್ಟಿ ಹಸರಾಣಿ ಭಾಜಿ ವರುಷ ಗಟ್ಟಿಲೆ ತಿನ್ನಬೇಕಾದ ಪ್ರಸಂಗ, ಕಾತಿಯ ತಟ್ಟಿನ ಮೇಲೆ ೧॥ ಘೊಟನ ಅಗಲಿನಲ್ಲಿಯೇ ಮಲಗಬೇಕಾಗಿದ್ದ ಆ ಸರ್ಕಸ್ಸು! ಇವನ್ನೆಲ್ಲ ನೆನೆದರೆ ಜೀವನ ಹತಾಶವಾಗದೆ ಉಳಿದೀತೇ?

ದೇಶಭಕ್ತಿಯ ನಿಶೆ ಏರಿದ್ದರಿಂದ ಮತ್ತು ಸಾವಿರಗಟ್ಟಲೆ ಚಳವಳಿ ಜನರು ಜೇಲಿಗೆ ಜಾತ್ರೆಯಂತೆ ಬಂದದ್ದರಿಂದ ಮಾತ್ರ ನಮ್ಮ ಜನರಿಗೆ ಮೇಲಿನ ಕಷ್ಟಗಳಿಲ್ಲವೂ ಸಹನೀಯವಾದವು. ಆದರೂ ದುರ್ಬಲ ಮನಸ್ಸಿನ ಹಲವಾರು ಕಾರ್ಯಕರ್ತರು ರಾತ್ರಿ " ಧುತ್ " ಎಂದು ಎದ್ದು ಕೂತು " ಹೀಗೆಯೇ ನಾವು ಎಷ್ಟುದಿನ ಕಾಲಕಳೆಯ

ಬೇಕಪ್ಪ!'' ಎಂದು ತಮ್ಮಷ್ಟಕ್ಕೆ ತಾವೇ ನಿಟ್ಟುಸಿರು ಬಿಡುತ್ತಿದ್ದರು. ಕ್ರಾಂತಿಯ ಆಂದೋಲನ ನಡೆದಾಗ ಅದರಲ್ಲಿ ಭಾಗವಹಿಸುವವರಲ್ಲಿ ಜನಜಂಗುಳಿಯೂ ಇದ್ದೇ ಇರುವದರಿಂದ ವಿವಿಧ ರೀತಿಯ ಜನ ಈ ಸಾರೆ ಜೇಲಿಗೆ ಬಂದಿದ್ದರು. ಬೀಡಿ ಸೇದುವವರು, ತಂಬಾಕ ತಿನ್ನುವವರು, ನಸ್ಯ ಏರಿಸುವವರು ಮುಂತಾದ ಹಲವಾರು ಚಟಗಳಿದ್ದವರೂ ಆವರಲ್ಲಿ ಸ್ವಾಭಾವಿಕವಾಗಿಯೇ ಅನೇಕರಿದ್ದರು. ವಿಸಾಪೂರ ಜೇಲಿನಲ್ಲಿ ಗಾಂಜಿ ಸೇದುವವರೂ ಒಬ್ಬರಿದ್ದರು. ಸಂಯಮ ವೃತ್ತಿಯ ಕಾರ್ಯಕರ್ತರಿಗೆ ಜೇಲಿನಲ್ಲಿ ವಿಶೇಷ ತೊಂದರೆ ಯಾಗುವದಿಲ್ಲ. ಅದರೆ ಸಾಮಾನ್ಯ ಜೀವಿಗಳಿಗೆ ಜೇಲುಗಳು ಭಾರಿ ಭಯಾನಕವಾಗಿದ್ದವು. ಜಾತ್ರೆಯಂತೆ ಜನ ಜೇಲಿನಲ್ಲಿ ತುಂಬಿದ್ದರಿಂದಲೇ ಒಬ್ಬರನ್ನು ನೋಡಿ ಇನ್ನೊಬ್ಬರು ಇದ್ದುದರಲ್ಲಿಯೇ ಸಮಾಧಾನಪಟ್ಟುಕೊಳ್ಳುತ್ತಿದ್ದರು. ಆದರೂ ತಿಂಗಳುಗಟ್ಟಲೆ ವರುಷ ಗಟ್ಟಲೆ ಮೇಲೆ ವರ್ಣಿಸಿದ ಸ್ಥಿತಿಯಲ್ಲಿ ಜೇಲಿನಲ್ಲಿ ಕಾಲಕಳೆಯುವದು ಸುಲಭವಾಗಿದ್ದಿಲ್ಲ. ಅವರ ಮನಸ್ಥಿತಿಯನ್ನು ಅರಿತು ದುರ್ಬಲತೆಯುಳ್ಳ ಅವರನ್ನು ಹೆಚ್ಚಾಗಿ ಅವರಿಸದಂತೆ ನೋಡುವದೂ ನಿಷ್ಠಾವಂತ ಕಾರ್ಯಕರ್ತರ, ಮುಖಂಡರ ಕರ್ತವ್ಯವಾಗಿತ್ತು. ಆದರೆ ಎಲ್ಲರೂ ಜೇಲಿನಲ್ಲಿಯೇ ಇದ್ದಾಗ ಮುಖಂಡರಾದರೂ ಮಾಡುವದೇನು ?

ಜೇಲಿನಲ್ಲಿ ಉಂಡಿ ಕಡಬುಗಳು !

ಈ ಆಂದೋಲನದಲ್ಲಿ ಜೇಲಿಗೆ ಹೋದವರಲ್ಲಿ ಶಿಕ್ಷೆ ಆದವರು ಸ್ಥಾನಬದ್ಧರು ಹೀಗೆ ಎರಡು ಪ್ರಕಾರದ ಕೈದಿಗಳಿದ್ದರು. ಶಿಕ್ಷೆ ಆದವರಲ್ಲಿ "ಬ" ಮತ್ತು "ಕ" ಹೀಗೆ ಎರಡು ವರ್ಗದವರೂ, ಸ್ಥಾನಬದ್ಧರಲ್ಲಿ ೧ ನೇ ವರ್ಗ ಎರಡನೇ ವರ್ಗ ಹೀಗೆ ಎರಡು ವರ್ಗದವರೂ ಇದ್ದರು. ಅವೆರನ್ನೆಲ್ಲ ಜೇಲಿನಲ್ಲಿಯ ಬೇರೆ ಬೇರೆ ಕಡೆಗೆ ಇಡುತ್ತಿದ್ದರು. ಜೇಲಿನಲ್ಲಿಯ ಕ್ವಾರಂಟಾಯಿನ್ ಹಾಗು ಅಂಡರ ಟ್ರಾಯಲ ವಾರ್ಡಗಳಲ್ಲಿ ೧ ನೇ ವರ್ಗದ ಸ್ಥಾನಬದ್ಧರನ್ನು ಇಟ್ಟಿದ್ದರು. ಉಳಿದವರನ್ನು ಸರ್ಕಲಗಳಲ್ಲಿ ಇಟ್ಟಿದ್ದರು. ಶಿಕ್ಷೆ ಆದವಂಗೆ ಮುಂಜಾನೆ ಜೋಳದ ಹಿಟ್ಟಿನ ಗಂಜಿ, ಮಧ್ಯಾಹ್ನ ಎರಡು ಜೋಳದ ರೊಟ್ಟಿ ಬ್ಯಾಳಿ, ಸಂಜೆಗೆ ರೊಟ್ಟಿ ಜೊತೆಗೆ ತೆಳ್ಳನ ಹಸರಾಣಿ ಭಾಜಿ (ಪಲ್ಯ) ಹೀಗೆ ಆಹಾರ ಕೊಡುತ್ತಿದ್ದರು.

ಸ್ಥಾನಬದ್ಧರಿಗೆ ತಮ್ಮ ಮನೆಯಿಂದ ಬೇಕಾದದ್ದನ್ನು ತರಿಸಿಕೊಳ್ಳಲು ಪ್ರತಿಬಂಧ ವಿದ್ದಿಲ್ಲ. ತಮ್ಮ ಮನೆಯ ಅರವೆ ಅಂಚಡಿ, ಹಾಸಿಗೆ ಹೊದಿಕೆ, ಬೀಡಿ ಸಿಗರೇಟು ನಾಸೀ ಪಂಡಿ, ಚಹಾ, ಕಾಫಿ, ಬ್ರೆಡ್, ಬಿಸ್ಕೀಟು, ಎಣ್ಣೆ, ತುಪ್ಪ, ಉಂಡಿ, ಅಪಲಕ್ಕಿ ಮುಂತಾದ ಬೇಕಾದ ವಸ್ತುಗಳನ್ನು ತಮ್ಮ ಖರ್ಚಿನಿಂದ ತರಿಸಿಕೊಳ್ಳಲು ಅವರಿಗೆ